| CCE RR/PR/PF/ NSR/NSPR FULL SYLLABUS | A |
|---|---|

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಜೂನ್ 2024 ರ ಪರೀಕ್ಷೆ - 2**
**JUNE 2024 EXAMINATION - 2**

**ಮಾದರಿ ಉತ್ತರಗಳು**
**MODEL ANSWERS**

ಸಂಕೇತ ಸಂಖ್ಯೆ : **83-K (Phy)** CODE NO. : **83-K (Phy)**

# ವಿಷಯ : ವಿಜ್ಞಾನ
# Subject : SCIENCE

**(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / Physics, Chemistry & Biology)**
**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**
**(Regular Repeater / Private Repeater / Private Fresh / NSR / NSPR)**
**(ಕನ್ನಡ ಮಾಧ್ಯಮ / Kannada Medium)**
**(ಭೌತ ವಿಜ್ಞಾನ / Physics)**

**ದಿನಾಂಕ : 20. 06. 2024 ]** **[ ಗರಿಷ್ಠ ಅಂಕಗಳು : 80**
**Date : 20. 06. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಭಾಗ – A** <br> **( ಭೌತ ವಿಜ್ಞಾನ )** | |
| **I.** | **ಬಹು-ಆಯ್ಕೆ ಪ್ರಶ್ನೆಗಳು : 4 × 1 = 4** | |
| 1. | ಒಂದು ಪೀನ ಮಸೂರದಿಂದ ಮಿಥ್ಯ ಮತ್ತು ನೇರವಾದ ಪ್ರತಿಬಿಂಬ ಪಡೆಯಲು, ವಸ್ತುವನ್ನು ಪೀನ ಮಸೂರದ ಮುಂದೆ ಇರಿಸಬೇಕಾದ ಸ್ಥಾನ <br> (A) $2F_1$ ಗಿಂತ ದೂರದಲ್ಲಿ <br> (B) $F_1$ ಮತ್ತು $2F_1$ ಗಳ ಮಧ್ಯೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | (C) ಪ್ರಧಾನ ಸಂಗಮ $F_1$ ನಲ್ಲಿ | |
| | (D) ಪ್ರಧಾನ ಸಂಗಮ $F_1$ ಮತ್ತು ದೃಕ್‌ಕೇಂದ್ರ $O$ ಗಳ ಮಧ್ಯೆ | |
| | **ಉತ್ತರ :** (D) ಪ್ರಧಾನ ಸಂಗಮ $F_1$ ಮತ್ತು ದೃಕ್‌ಕೇಂದ್ರ $O$ ಗಳ ಮಧ್ಯೆ | 1 |
| 2. | ಮಂಜು ಮತ್ತು ಹೊಗೆಯಿಂದ ಕನಿಷ್ಠ ಚದುರುವ ಬಣ್ಣವೆಂದರೆ | |
| | (A) ಕಿತ್ತಳೆ (B) ನೀಲಿ | |
| | (C) ಕೆಂಪು (D) ನೇರಳೆ | |
| | **ಉತ್ತರ :** (C) ಕೆಂಪು | 1 |
| 3. | ವಿದ್ಯುತ್‌ಪ್ರವಾಹವಿರುವ ಉದ್ದವಾದ ನೇರ ಸೊಲೆನಾಯ್ಡ್‌ನ ಒಳಭಾಗದಲ್ಲಿನ ಕಾಂತಕ್ಷೇತ್ರವು | |
| | (A) ಎಲ್ಲಾ ಬಿಂದುಗಳಲ್ಲಿ ಸಮನಾಗಿರುತ್ತದೆ | |
| | (B) ಸೊನ್ನೆ ಆಗಿರುತ್ತದೆ | |
| | (C) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಕಡಿಮೆಯಾಗುತ್ತದೆ | |
| | (D) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಹೆಚ್ಚಾಗುತ್ತದೆ | |
| | **ಉತ್ತರ :** (A) ಎಲ್ಲಾ ಬಿಂದುಗಳಲ್ಲಿ ಸಮನಾಗಿರುತ್ತದೆ | 1 |
| 4. | ಬೆಳಕಿನ ವಕ್ರೀಭವನ ಮತ್ತು ಚದುರುವಿಕೆಗೆ ಸಂಬಂಧಿಸಿದಂತೆ ಕೊಟ್ಟಿರುವ ಹೇಳಿಕೆಗಳಲ್ಲಿ ತಪ್ಪಾದ ಹೇಳಿಕೆಯನ್ನು ಗುರುತಿಸಿ | |
| | (A) ನಕ್ಷತ್ರಗಳು ಮಿನುಗುತ್ತವೆ | |
| | (B) ಅತೀ ಎತ್ತರದಲ್ಲಿ ಹಾರುತ್ತಿರುವ ಬಾಹ್ಯಾಕಾಶ ಯಾತ್ರಿಗೆ ಆಕಾಶವು ನೀಲಿಯಾಗಿ ಕಾಣುತ್ತದೆ | |
| | (C) ಸೂರ್ಯನು ವಾಸ್ತವ ಸೂರ್ಯೋದಯಕ್ಕಿಂತ ಎರಡು ನಿಮಿಷ ಮೊದಲು ನಮಗೆ ಗೋಚರಿಸುತ್ತಾನೆ | |
| | (D) ಗ್ರಹಗಳು ಮಿನುಗುವುದಿಲ್ಲ | |
| | **ಉತ್ತರ :** (B) ಅತೀ ಎತ್ತರದಲ್ಲಿ ಹಾರುತ್ತಿರುವ ಬಾಹ್ಯಾಕಾಶ ಯಾತ್ರಿಗೆ ಆಕಾಶವು ನೀಲಿಯಾಗಿ ಕಾಣುತ್ತದೆ | 1 |
| **II.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **$2 \times 1 = 2$** | |
| 5. | ಒಂದು ವಿದ್ಯುತ್‌ಮಂಡಲದಲ್ಲಿ ಉಪಯೋಗಿಸುವ ಕೆಳಗಿನ ಘಟಕಗಳ ಚಿಹ್ನೆಗಳನ್ನು ಬರೆಯಿರಿ : | |
| | i) ಸೇರ್ಪಡೆಯಿಲ್ಲದೆ ದಾಟಿದ ತಂತಿ | |
| | ii) ವೋಲ್ಟ್ ಮೀಟರ್ | |
| | **ಉತ್ತರ :** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

i) 

ii)  ½ + ½ — 1

6. ಗಾಜಿನ ಪಟ್ಟಕದ ಮೂಲಕ ಬೆಳಕಿನ ವಕ್ರೀಭವನವನ್ನು ತೋರಿಸುವ ಕೆಳಗಿನ ಚಿತ್ರವನ್ನು ಗಮನಿಸಿ.




$\angle x$ ಎಂದು ಗುರುತಿಸಿರುವ ಕೋನವನ್ನು ಹೆಸರಿಸಿ ಮತ್ತು ಆ ಕೋನದ ಉಂಟಾಗುವಿಕೆಗೆ ಕಾರಣ ಕೊಡಿ.

***ಉತ್ತರ :***

★ $\angle x$ → ದಿಕ್ಪಲ್ಲಟ ಕೋನ ½

★ ಪಟ್ಟಕದ ವಿಶೇಷ ಆಕಾರವು ನಿರ್ಗಮನ ಕಿರಣವನ್ನು ಪತನ ಕಿರಣದ ದಿಕ್ಕಿನಿಂದ ಬಾಗುವಂತೆ ಮಾಡುತ್ತವೆ. ½ — 1

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 2 = 4**

7. ಕೊಟ್ಟಿರುವ ಚಿತ್ರವನ್ನು ಗಮನಿಸಿ.




ಸುರುಳಿ–2 ಕ್ಕೆ ಸಂಪರ್ಕಿಸಲಾಗಿರುವ ಪ್ಲಗ್‌ಗೆ ಕೀಯನ್ನು ಸೇರಿಸಿದಾಗ ಉಳಿದಿರುವ ಯಾವ ಸುರುಳಿಯಲ್ಲಿ ಅಧಿಕ ವಿದ್ಯುತ್‌ಪ್ರವಾಹ ಪ್ರೇರಿತವಾಗುತ್ತದೆ ? ಏಕೆ ?

***ಉತ್ತರ :***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಸುರುಳಿ–1 ರಲ್ಲಿ ಅಧಿಕ ವಿದ್ಯುತ್‌ಪ್ರವಾಹ ಪ್ರೇರಿತವಾಗುತ್ತದೆ. 1 | |
| | ★ ಸುರುಳಿ– 3 ಕ್ಕಿಂತ ಸುರುಳಿ–1 ರಲ್ಲಿ ಸುತ್ತುಗಳ ಸಂಖ್ಯೆ ಹೆಚ್ಚಾಗಿದೆ. | |
| | ★ ಸುರುಳಿಯಲ್ಲಿ ಸುತ್ತುಗಳ ಸಂಖ್ಯೆ ಹೆಚ್ಚಾದಂತೆ ಪ್ರೇರಿತ ವಿದ್ಯುತ್‌ಪ್ರವಾಹ ಹೆಚ್ಚಾಗುತ್ತದೆ. | |
| | (ಯಾವುದಾದರೂ ಒಂದು) 1 | 2 |
| 8. | ಬೆಳಕಿನ ಪ್ರತಿಫಲನದ ನಿಯಮಗಳನ್ನು ನಿರೂಪಿಸಿ. | |
| | ***ಉತ್ತರ :*** | |
| | i) ಪತನಕೋನವು ಪ್ರತಿಫಲನ ಕೋನಕ್ಕೆ ಸಮನಾಗಿರುತ್ತದೆ. 1 | |
| | ii) ಪತನಕಿರಣ, ಪತನಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು ಪ್ರತಿಫಲಿತ ಕಿರಣ, ಈ ಮೂರೂ ಒಂದೇ ಸಮತಲದಲ್ಲಿರುತ್ತದೆ. 1 | 2 |
| **IV.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9** | |
| 9. | ಒಂದು ನಿಮ್ನ ಮಸೂರದ ಸಂಗಮದೂರವು 25 cm ಇದೆ. ಮಸೂರದಿಂದ ಪ್ರತಿಬಿಂಬವು 20 cm ದೂರದಲ್ಲಿ ಉಂಟಾಗಲು ವಸ್ತುವನ್ನು ಮಸೂರದಿಂದ ಎಷ್ಟು ದೂರದಲ್ಲಿ ಇಡಬೇಕು ? ಮಸೂರದಿಂದ ಉಂಟಾಗುವ ಪ್ರತಿಬಿಂಬದ ವರ್ಧನೆಯನ್ನು ಕಂಡುಹಿಡಿಯಿರಿ. | |
| | ***ಉತ್ತರ :*** | |
| | ಇಲ್ಲಿ, $v = -20$ cm, $f = -25$ cm, $u = ?$ | |
| | $\frac{1}{v} - \frac{1}{u} = \frac{1}{f}$ | |
| | $\therefore \quad -\frac{1}{u} = \frac{1}{f} - \frac{1}{v}$ | |
| | $\therefore \quad \frac{1}{u} = -\frac{1}{f} + \frac{1}{v}$ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | $\therefore \quad \frac{1}{u} = \frac{1}{v} - \frac{1}{f}$ | | |
| | $\therefore \quad \frac{1}{u} = \frac{1}{-20} - \frac{1}{-25}$ | | |
| | $\therefore \quad \frac{1}{u} = -\frac{1}{20} + \frac{1}{25}$ | | |
| | $\therefore \quad \frac{1}{u} = \frac{-5+4}{100}$ | | |
| | $\therefore \quad \frac{1}{u} = -\frac{1}{100}$ | | |
| | $\therefore \quad u = -100$ cm | 2 | |
| | $\therefore$ ವಸ್ತು ದೂರ = 100 cm | | |
| | $\therefore$ ವರ್ಧನೆ $m = \frac{v}{u}$ | | |
| | $= \frac{-20}{-100}$ | | |
| | $= \frac{1}{5}$ | 1 | |
| | $\therefore$ ವರ್ಧನೆ $m = +0{\cdot}2$ | | 3 |
| 10. | ಕೆಳಗಿನವುಗಳನ್ನು ತೋರಿಸುವ ರೇಖಾಚಿತ್ರಗಳನ್ನು ಬರೆಯಿರಿ : | | |
| | i) ದೂರ ದೃಷ್ಟಿ (ಹೈಪರ್ ಮೆಟ್ರೋಪಿಯಾ) ಕಣ್ಣಿನ ಹತ್ತಿರ ಬಿಂದು | | |
| | ii) ದೂರ ದೃಷ್ಟಿ ಕಣ್ಣು | | |
| | iii) ದೂರ ದೃಷ್ಟಿಗೆ ಪರಿಹಾರ | | |
| | ***ಉತ್ತರ :*** | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| | i) ***ದೂರ ದೃಷ್ಟಿ ( ಹೈಪರ್ ಮೆಟ್ರೋಪಿಯಾ) ಕಣ್ಣಿನ ಹತ್ತಿರ ಬಿಂದು :*** | | |
| |  | 1 | |
| | ii) ***ದೂರ ದೃಷ್ಟಿ ಕಣ್ಣು :*** | | |
| |  | 1 | |
| | iii) ***ದೂರ ದೃಷ್ಟಿಗೆ ಪರಿಹಾರ :*** | | |
| |  | 1 | 3 |
| 11. | a) ಜೈವಿಕ ಅನಿಲ ಸ್ಥಾವರದಲ್ಲಿರುವ ಪಾಚಕದ ಕಾರ್ಯವನ್ನು ತಿಳಿಸಿ.<br>b) ಜೈವಿಕ ಅನಿಲವು ಅತ್ಯುತ್ತಮ ಇಂಧನವಾಗಿದೆ ಎಂದು ಪುಷ್ಟೀಕರಿಸುವ ಅದರ ನಾಲ್ಕು ಗುಣಗಳನ್ನು ತಿಳಿಸಿ.<br>**ಅಥವಾ**<br>a) ಉತ್ತಮ ಶಕ್ತಿಯ ಆಕರವು ಹೊಂದಿರುವ ಯಾವುದಾದರೂ ನಾಲ್ಕು ಗುಣಗಳನ್ನು ತಿಳಿಸಿ.<br>b) ಸೌರಕೋಶಗಳ ಪ್ರಮುಖ ಅನುಕೂಲಗಳನ್ನು ತಿಳಿಸಿ.<br>***ಉತ್ತರ :*** | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | a) ***ಜೈವಿಕ ಅನಿಲ ಸ್ಥಾವರದಲ್ಲಿರುವ ಪಾಚಕದ ಕಾರ್ಯ :*** | |
| | ಇಲ್ಲಿ ಆಕ್ಸಿಜನ್‌ರಹಿತ ಉಸಿರಾಟ ನಡೆಸುವ ಸೂಕ್ಷ್ಮಾಣುಜೀವಿಗಳು ಸಗಣಿ ಬಗ್ಗಡದಲ್ಲಿರುವ ಸಂಕೀರ್ಣ ಸಂಯುಕ್ತಗಳನ್ನು ವಿಘಟಿಸುತ್ತದೆ. ಇಲ್ಲಿ ವಿಘಟನಾ ಕ್ರಿಯೆ ಪೂರ್ಣಗೊಂಡು ಜೈವಿಕ ಅನಿಲ ಬಿಡುಗಡೆಯಾಗುತ್ತದೆ. 1 | |
| | b) ★ ಜೈವಿಕ ಅನಿಲದಲ್ಲಿ 75% ಮೀಥೇನ್ ಅನಿಲವಿರುತ್ತದೆ. | |
| | ★ ಇದು ಶೇಷ ಉಳಿಸದೇ ಹೊಗೆ ರಹಿತವಾಗಿ ಉರಿಯುತ್ತದೆ. | |
| | ★ ಇದರ ಶಾಖ ದಕ್ಷತೆ ಹೆಚ್ಚು. | |
| | ★ ಬೆಳಕನ್ನು ಪಡೆಯಲು ಇದನ್ನು ಬಳಸಬಹುದು. | |
| | ★ ಉಳಿಕೆಯ ಬಗ್ಗಡವನ್ನು ಉತ್ತಮ (ಅತ್ಯುತ್ತಮ) ಗೊಬ್ಬರವಾಗಿ ಬಳಸಲಾಗುತ್ತದೆ. | |
| | ★ ಹೆಚ್ಚಿನ ಪ್ರಮಾಣದ ಜೈವಿಕ ತ್ಯಾಜ್ಯ ಮತ್ತು ಕೊಳಚೆ ಪದಾರ್ಥಗಳ ಬಳಕೆಯು ತ್ಯಾಜ್ಯ ವಿಲೇವಾರಿಗೆ ದಕ್ಷ ಮತ್ತು ಕ್ಷೇಮಕರ ವಿಧಾನವಾಗಿದೆ. | |
| | (ಯಾವುದಾದರೂ ನಾಲ್ಕು) ½ × 4 = 2 | 3 |
| | **ಅಥವಾ** | |
| | a) ***ಉತ್ತಮ ಶಕ್ತಿಯ ಆಕರವು ಹೊಂದಿರುವ ಗುಣಗಳು :*** | |
| | ★ ಪ್ರತಿ ಘಟಕ ಪರಿಮಾಣ ಅಥವಾ ದ್ರವ್ಯರಾಶಿಗೆ ಅತೀ ಹೆಚ್ಚು ಕೆಲಸ ಮಾಡಬೇಕು. ½ | |
| | ★ ಅದು ಸುಲಭವಾಗಿ ದೊರೆಯಬೇಕು. ½ | |
| | ★ ಅದು ಸುಲಭವಾಗಿ ಸಂಗ್ರಹಿಸಲು ಮತ್ತು ಸಾಗಿಸಲು ಸಾಧ್ಯವಾಗಬೇಕು. ½ | |
| | ★ ಅದು ಮಿತವ್ಯಯಕಾರಿಯಾಗಿರಬೇಕು. ½ | |
| | b) ***ಸೌರಕೋಶಗಳ ಪ್ರಮುಖ ಅನುಕೂಲಗಳು :*** | |
| | ★ ಅವು ಚಲನಶೀಲ ಭಾಗಗಳನ್ನು ಹೊಂದಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಯಾವುದೇ ಕೇಂದ್ರೀಕರಿಸುವ ಸಾಧನದ ಸಹಾಯವಿಲ್ಲದೇ ಅವು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತವೆ. | |
| | ★ ಕಡಿಮೆ ನಿರ್ವಹಣೆ ಅಗತ್ಯ ಹೊಂದಿದೆ. | |
| | ★ ಜನರು ತಲುಪಲಾಗದಂತಹ ಅಥವಾ ವಿದ್ಯುತ್‌ತಂತಿ ಅಳವಡಿಸಲು ಸಾಧ್ಯವಾಗದ ದುರ್ಗಮ ಪ್ರದೇಶ ಅಥವಾ ತಂತಿ ಅಳವಡಿಸಲು ಹೆಚ್ಚು ಖರ್ಚಾಗುವ ಪ್ರದೇಶ ವ್ಯವಹಾರಿಕವಾಗಿ ಲಾಭದಾಯಕವಲ್ಲದ ಪ್ರದೇಶಗಳಲ್ಲೂ ಸೌರಫಲಕಗಳನ್ನು ಅಳವಡಿಸಬಹುದು. | |
| | (ಯಾವುದಾದರೂ ಎರಡು) ½ + ½ = 1 | 3 |
| **V.** | **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ : 1 × 4 = 4** | |
| 12. | a) ದಿಕ್ಸೂಚಿಯ ಸಹಾಯದಿಂದ ದಂಡಕಾಂತವೊಂದರ ಸುತ್ತಲಿನ ಕಾಂತೀಯ ಬಲರೇಖೆಗಳನ್ನು ಗುರುತಿಸುವ ಪ್ರಯೋಗವನ್ನು ವಿವರಿಸಿ. | |
| | b) ಕಾಂತೀಯ ಬಲರೇಖೆಗಳ ಎರಡು ಗುಣಗಳನ್ನು ತಿಳಿಸಿ. | |
| | **ಅಥವಾ** | |
| | a) ವಿದ್ಯುತ್‌ಪ್ರವಾಹವಿರುವ ವಾಹಕವನ್ನು ಕಾಂತಕ್ಷೇತ್ರದಲ್ಲಿ ಇರಿಸಿದಾಗ ಅದು ಬಲವನ್ನು ಅನುಭವಿಸುತ್ತದೆ ಎಂದು ತೋರಿಸುವ ಪ್ರಯೋಗವನ್ನು ವಿವರಿಸಿ. | |
| | b) ಒಂದು ಸರಳ ವಿದ್ಯುತ್ ಮೋಟಾರ್ ಅನ್ನು ವಾಣಿಜ್ಯ ಮೋಟಾರ್ ಆಗಿ ಹೇಗೆ ಪರಿವರ್ತಿಸಲಾಗುವುದು ? | |
| | ***ಉತ್ತರ :*** | |
| | a) ***ದಿಕ್ಸೂಚಿಯ ಸಹಾಯದಿಂದ ದಂಡಕಾಂತವೊಂದರ ಸುತ್ತಲಿನ ಕಾಂತೀಯ ಬಲರೇಖೆಯನ್ನು ಎಳೆಯುವುದು :*** | |
| | ★ ಬಿಳಿ ಹಾಳೆಯ ಮೇಲೆ ದಂಡಕಾಂತವನ್ನಿರಿಸಿ ದಂಡಕಾಂತದ ಸುತ್ತಲಿನ ಸೀಮಾರೇಖೆಯನ್ನು ಗುರುತು ಮಾಡಿ. ½ | |
| | ★ ದಂಡಕಾಂತದ ಉತ್ತರ ಧ್ರುವದ ಬಳಿ ದಿಕ್ಸೂಚಿಯನ್ನಿಡಿ. ದಿಕ್ಸೂಚಿಯ ದಕ್ಷಿಣ ಧ್ರುವವು ದಂಡಕಾಂತದ ಉತ್ತರ ಧ್ರುವದ ಕಡೆಗೆ ತಿರುಗುತ್ತದೆ. ಆ ಬಿಂದುವನ್ನು ಗುರುತಿಸಿ. ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ದಿಕ್ಸೂಚಿಯ ಉತ್ತರ ಧ್ರುವವು ಮೊದಲು ಆಕ್ರಮಿಸಿದ್ದ ಸ್ಥಾನವನ್ನು ದಕ್ಷಿಣ ಧ್ರುವವು ಆಕ್ರಮಿಸುವಂತೆ ದಿಕ್ಸೂಚಿಯನ್ನು ಚಲಿಸಿ ಆ ಬಿಂದುವನ್ನು ಗುರುತಿಸಿ. ½ | |
| | ★ ಇದೇ ರೀತಿ ದಿಕ್ಸೂಚಿಯನ್ನು ದಂಡಕಾಂತದ ದಕ್ಷಿಣ ಧ್ರುವ ತಲುಪುವವರೆಗೆ ಹಂತ-ಹಂತವಾಗಿ ಚಲಿಸುವುದನ್ನು ಮುಂದುವರೆಸಿ. ½ | |
| | ★ ಗುರುತು ಮಾಡಿದ ಬಿಂದುಗಳನ್ನು ಒಂದು ನಯವಾದ ವಕ್ರರೇಖೆಯಿಂದ ಸೇರಿಸಿ. ½ | |
| | ★ ಈ ವಕ್ರರೇಖೆಯು ಕಾಂತೀಯ ಬಲರೇಖೆಯನ್ನು ಪ್ರತಿನಿಧಿಸುತ್ತದೆ. ½ | |
| | b) ***ಕಾಂತೀಯ ಬಲರೇಖೆಗಳ ಎರಡು ಗುಣಗಳು :*** | |
| | ★ ಕಾಂತೀಯ ಬಲರೇಖೆಗಳು ಉತ್ತರ ಧ್ರುವದಲ್ಲಿ ಉತ್ಸರ್ಜಿತವಾಗಿ ದಕ್ಷಿಣ ಧ್ರುವದಲ್ಲಿ ವಿಲೀನಗೊಳ್ಳುತ್ತವೆ. | |
| | ★ ಕಾಂತದ ಒಳಭಾಗದಲ್ಲಿ ಕಾಂತದ ದಕ್ಷಿಣ ಧ್ರುವದಿಂದ ಉತ್ತರ ಧ್ರುವದೆಡೆಗೆ ಕಾಂತೀಯ ಬಲರೇಖೆಗಳಿರುತ್ತವೆ. | |
| | ★ ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ. | |
| | ★ ಕಾಂತೀಯ ಬಲರೇಖೆಗಳ ದಟ್ಟಣೆ ಹೆಚ್ಚಾಗಿದ್ದಲ್ಲಿ ಕಾಂತಕ್ಷೇತ್ರದ ಬಲವು ಹೆಚ್ಚಾಗಿರುತ್ತದೆ. | |
| | ★ ಯಾವುದೇ ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ. | |
| | (ಯಾವುದಾದರೂ ಎರಡು) ½ + ½ = 1 | 4 |
| | **ಅಥವಾ** | |
| | a) ★ ಅಲ್ಯುಮಿನಿಯಂನ ಒಂದು ಚಿಕ್ಕ ಸಲಾಕೆಯನ್ನು ಎರಡು ವಾಹಕ ತಂತಿಗಳ ಸಹಾಯದಿಂದ ನೇತು ಹಾಕಿ. ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಒಂದು ಶಕ್ತಿಯುತ ಕುದುರೆ ಲಾಳಾಕಾರದ ಕಾಂತವನ್ನು ತೆಗೆದುಕೊಂಡು ಅದರ ಕಾಂತಕ್ಷೇತ್ರವು ಮೇಲ್ಮುಖವಾಗಿರುವಂತೆ ಆ ಎರಡೂ ಧ್ರುವಗಳ ನಡುವೆ ಚಿಕ್ಕ ಸಲಾಕೆಯು ಇರುವಂತೆ ಇರಿಸಬೇಕು. ½ | |
| | ★ ಅಲ್ಯುಮಿನಿಯಂ ಸಲಾಕೆಯನ್ನು ಬ್ಯಾಟರಿ, ಸ್ವಿಚ್ ಮತ್ತು ರಿಯೋಸ್ಟಾಟ್‌ಗಳಿಗೆ ಸರಣಿ ಜೋಡಣೆಯಲ್ಲಿ ಸಂಪರ್ಕಿಸಬೇಕು. ½ | |
| | ★ ಈಗ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಅಲ್ಯುಮಿನಿಯಂ ಸಲಾಕೆಯ ಮೂಲಕ ವಿದ್ಯುತ್ ಹರಿಸಬೇಕು. ½ | |
| | ★ ಸಲಾಕೆಯು ಒಂದು ದಿಕ್ಕಿನಲ್ಲಿ ಸ್ಥಾನಪಲ್ಲಟಗೊಳ್ಳುತ್ತದೆ. ½ | |
| | ★ ಸಲಾಕೆಯಲ್ಲಿನ ವಿದ್ಯುತ್‌ಪ್ರವಾಹದ ದಿಕ್ಕನ್ನು ಬದಲಾಯಿಸಿದಾಗ, ಅದು ವಿರುದ್ಧ ದಿಕ್ಕಿನಲ್ಲಿ ಸ್ಥಾನಪಲ್ಲಟಗೊಳ್ಳುತ್ತದೆ. ½ | |
| | ಆದ್ದರಿಂದ ವಿದ್ಯುತ್‌ಪ್ರವಾಹವಿರುವ ಸಲಾಕೆಯು ಕಾಂತಕ್ಷೇತ್ರದಲ್ಲಿ ಅದರ ಉದ್ದಕ್ಕೆ ಲಂಬವಾಗಿ ಒಂದು ಬಲವನ್ನು ಅನುಭವಿಸುತ್ತವೆ. | |
| | b) ★ ಸ್ಥಿರವಾದ ಕಾಂತದ ಬದಲು ವಿದ್ಯುತ್ಕಾಂತವನ್ನು ಬಳಸುವುದರಿಂದ. | |
| | ★ ವಿದ್ಯುತ್‌ವಾಹಕ ಸುರುಳಿಯಲ್ಲಿನ ಸುತ್ತುಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ. | |
| | ★ ಸುರುಳಿಯಿಂದ ಸುತ್ತಲ್ಪಟ್ಟ ಮೃದು ಕಬ್ಬಿಣವನ್ನು ಬಳಸುವುದರಿಂದ. | |
| | (ಯಾವುದಾದರೂ ಎರಡು) ½ + ½ = 1 | 4 |
| **VI.** | **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ : 1 × 5 = 5** | |
| 13. | a) ವಾಹಕದ ರೋಧ ಎಂದರೇನು ? ವಾಹಕದ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವ ಬದಲು ಸಮಾಂತರವಾಗಿ ಜೋಡಿಸುವುದು ಪ್ರಯೋಜನಕಾರಿಯಾಗಿದೆ ಏಕೆ ? ವಿವರಿಸಿ. | |
| | ***ಉತ್ತರ :*** | |
| | a) ★ ಒಂದು ವಾಹಕದಲ್ಲಿ ಪ್ರವಹಿಸುವ ಆವೇಶಗಳ ಎಲೆಕ್ಟ್ರಾನ್‌ಗಳ ಪ್ರವಾಹವನ್ನು ವಿರೋಧಿಸುವ ಆ ವಾಹಕದ ಗುಣವನ್ನು ವಾಹಕದ ರೋಧ ಎಂದು ಕರೆಯುವರು. 1 | |
| | ★ ***ವಾಹಕದ ರೋಧವು ಅವಲಂಬಿಸಿರುವ ಅಂಶಗಳು :*** | |
| | i) ಅದರ ಉದ್ದ ½ | |
| | ii) ಅದರ ಅಡ್ಡಕೊಯ್ತು ½ | |
| | iii) ಅದರ ಪ್ರಾಕೃತಿಕ ಗುಣ ½ | |
| | iv) ಉಷ್ಣತೆ ½ | |
| | b) ★ ಸಮಾಂತರ ಮಂಡಲವು ಸಂಪರ್ಕಗೊಂಡ ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್‌ಪ್ರವಾಹವನ್ನು ವಿಭಜಿಸುತ್ತದೆ. | |
| | ★ ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯನಿರ್ವಹಿಸಲು ವಿಭಿನ್ನ ವಿದ್ಯುತ್‌ಪ್ರವಾಹದ ಅಗತ್ಯವಿರುವ ಸಂದರ್ಭಗಳಲ್ಲಿ ಇದು ಸಹಾಯಕವಾಗಿರುತ್ತದೆ. | |
| | ★ ಆದರೆ, ಸರಣಿಯಲ್ಲಿ ಜೋಡಿಸಿದ ಮಂಡಲದ ಯಾವುದಾದರೂ ಒಂದು ಘಟಕ ವಿಫಲವಾದರೆ ಮಂಡಲವು ಮುರಿದು ಹೋಗುತ್ತದೆ ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. | |
| | (ಯಾವುದಾದರೂ ಎರಡು) 1 + 1 | 5 |

| CCE RR/PR/PF/ NSR/NSPR FULL SYLLABUS | A |
|---|---|

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**

**MALLESHWARAM, BENGALURU – 560 003**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

## ಮಾದರಿ ಉತ್ತರಗಳು

## MODEL ANSWERS

**ಸಂಕೇತ ಸಂಖ್ಯೆ : 83-K (Chem.)** **CODE NO. : 83-K (Chem.)**

## ವಿಷಯ : ವಿಜ್ಞಾನ

## Subject : SCIENCE

**(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / Physics, Chemistry & Biology)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

**(ಕನ್ನಡ ಮಾಧ್ಯಮ / Kannada Medium)**

**(ರಸಾಯನ ವಿಜ್ಞಾನ / Chemistry)**

**ದಿನಾಂಕ : 20. 06. 2024 ]** **[ ಗರಿಷ್ಠ ಅಂಕಗಳು : 80**

**Date : 20. 06. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – B**<br>**( ರಸಾಯನ ವಿಜ್ಞಾನ )** | |
| **VII.** | **ಬಹು-ಆಯ್ಕೆ ಪ್ರಶ್ನೆಗಳು :** **$2 \times 1 = 2$** | |
| 14. | ಪ್ರೊಪೇನ್ಯಾಲ್‌ನ ಅಣುಸೂತ್ರ<br>(A) $C_2H_5$ COOH (B) $C_2H_5$ CHO<br>(C) $C_3H_5$ CHO (D) $C_3H_5$ COOH<br>*ಉತ್ತರ :* (B) $C_2H_5$ CHO | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 15. | ಅಲ್ಯೂಮಿನಿಯಂ, ಕಬ್ಬಿಣ, ಮೆಗ್ನೀಷಿಯಂ ಮತ್ತು ಸತು ಲೋಹಗಳು ಸಾರರಿಕ್ತ ಹೈಡ್ರೋಕ್ಲೋರಿಕ್ ಆಮ್ಲದೊಂದಿಗೆ ವರ್ತಿಸಿವೆ. ಈ ಲೋಹಗಳ ಕ್ರಿಯಾಶೀಲತೆಯನ್ನು ಇಳಿಕೆ ಕ್ರಮದಲ್ಲಿ ಸೂಚಿಸುವ ಸರಣಿಯು,<br>(A) Mg > Al > Zn > Fe (B) Al > Mg > Fe > Zn<br>(C) Fe > Zn > Al > Mg (D) Fe > Mg > Zn > Al<br>***ಉತ್ತರ :*** (A) Mg > Al > Zn > Fe | 1 |
| **VIII.** | **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ : 4 × 1 = 4** | |
| 16. | 1M ಅಸಿಟಿಕ್ ಆಮ್ಲವನ್ನು 1M ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣದೊಂದಿಗೆ ಮಿಶ್ರಣ ಮಾಡಿದಾಗ ದೊರೆಯುವ ಲವಣದ ಸ್ವಭಾವವನ್ನು ಸೂಕ್ತ ಕಾರಣದೊಂದಿಗೆ ನಿರ್ಧರಿಸಿ.<br>***ಉತ್ತರ:***<br>★ ಇದು ಪ್ರತ್ಯಾಮ್ಲೀಯ ಲವಣವಾಗಿದೆ. ½<br>★ ಏಕೆಂದರೆ ಸೋಡಿಯಂ ಹೈಡ್ರಾಕ್ಸೈಡ್ ಒಂದು ಪ್ರಬಲ ಪ್ರತ್ಯಾಮ್ಲ. ½ | 1 |
| 17. | ಬ್ಯೂಟೇನ್‌ನ ರಚನಾ ಸಮಾಂಗಿಗಳ ರಚನೆಯನ್ನು ಬರೆಯಿರಿ.<br>***ಉತ್ತರ:***<br> <br>½ + ½ | 1 |
| 18. | ಸಾಮಾನ್ಯವಾಗಿ ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿ ಬಿಂದುಗಳನ್ನು ಹೊಂದಿವೆ. ಏಕೆ ?<br>***ಉತ್ತರ:***<br>ಅಯಾನಿಕ್ ಸಂಯುಕ್ತಗಳಲ್ಲಿ ಅಣುಗಳ ನಡುವಣ ಪ್ರಬಲ ಅಯಾನಿಕ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 19. | "ಮಾರ್ಜಕಗಳು ಸಾಬೂನುಗಳಿಗಿಂತ ಉತ್ತಮ ಸ್ವಚ್ಛಕಾರಿ" ಈ ಹೇಳಿಕೆಯನ್ನು ಸಮರ್ಥಿಸಿ.<br>***ಉತ್ತರ :***<br>ಚರಟ ಉಂಟು ಮಾಡದೆ, ಗಡುಸು ನೀರಿನಲ್ಲಿಯೂ ಕೊಳೆಯನ್ನು ಸ್ವಚ್ಛಗೊಳಿಸುತ್ತವೆ. | 1 |
| **IX.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **$3 \times 2 = 6$** | |
| 20. | ನೀರಿನಲ್ಲಿ ಆಮ್ಲೀಯ ದ್ರಾವಣವು ವಿದ್ಯುತ್ ಪ್ರವಹಿಸುವುದನ್ನು ತೋರಿಸುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ ಮತ್ತು ಸಾರರಿಕ್ತ HCl ದ್ರಾವಣವನ್ನು ಗುರುತಿಸಿ.<br>***ಉತ್ತರ :***<br><br>ಸಾರರಿಕ್ತ HCl ದ್ರಾವಣ<br>ಚಿತ್ರಕ್ಕೆ — 1½<br>ಭಾಗ ಗುರುತಿಸುವುದಕ್ಕೆ — ½ | 2 |
| 21. | ಮಿಶ್ರಲೋಹಗಳು ಎಂದರೇನು ? ತಾಮ್ರದ ಎರಡು ಮಿಶ್ರಲೋಹಗಳನ್ನು ಹೆಸರಿಸಿ.<br>**ಅಥವಾ**<br>ಉಭಯಧರ್ಮಿ ಆಕ್ಸೈಡ್‌ಗಳು ಎಂದರೇನು ? ಎರಡು ಉದಾಹರಣೆಗಳನ್ನು ಕೊಡಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :***<br>★ ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹಗಳ ಅಥವಾ ಲೋಹ-ಅಲೋಹಗಳ ಸಮರೂಪ ಮಿಶ್ರಣವಾಗಿದೆ. 1<br>★ ತಾಮ್ರದ ಮಿಶ್ರ ಲೋಹಗಳು (i) ಕಂಚು (ii) ಹಿತ್ತಾಳೆ ½ + ½ | 2 |
| | **ಅಥವಾ**<br>ಆಮ್ಲ ಮತ್ತು ಪ್ರತ್ಯಾಮ್ಲಗಳೊಂದಿಗೆ ವರ್ತಿಸಿ ನೀರು ಮತ್ತು ಲವಣವನ್ನು ಉಂಟುಮಾಡುವ ಲೋಹೀಯ ಆಕ್ಸೈಡ್‌ಗಳು. 1<br>***ಉದಾ. :*** ಅಲ್ಯೂಮಿನಿಯಂ ಆಕ್ಸೈಡ್ ( $Al_2O_3$ ) ½<br>ಸತುವಿನ ಆಕ್ಸೈಡ್ ( ZnO ) ½ | 2 |
| 22. | ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಪ್ರಯೋಗದ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ.<br>***ಉತ್ತರ :***<br> | 2 |
| **X.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9** | |
| 23. | a) ಚಲುವೆಪುಡಿಯ ರಾಸಾಯನಿಕ ಸೂತ್ರವೇನು ? ಈ ಲವಣದ ಎರಡು ಉಪಯೋಗಗಳನ್ನು ಬರೆಯಿರಿ.<br>b) ಈ ಕೆಳಗಿನ ವಸ್ತುಗಳಲ್ಲಿ ಕಂಡುಬರುವ ಆಮ್ಲವನ್ನು ಹೆಸರಿಸಿ :<br>i) ಮೊಸರು<br>ii) ಜಠರ ರಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :***<br>a) ಚಲುವೆ ಪುಡಿಯ ರಾಸಾಯನಿಕ ಸೂತ್ರ : $CaOCl_2$ 1<br>*ಉಪಯೋಗಗಳು :*<br>★ ಕಾಗದ ಕಾರ್ಖಾನೆ, ಬಟ್ಟೆ ಕಾರ್ಖಾನೆ ಮತ್ತು ಲಾಂಡ್ರಿ ಕೆಲಸಗಳಲ್ಲಿ ಚಲುವೆಕಾರಕವಾಗಿ ಬಳಸುವರು.<br>★ ರಾಸಾಯನಿಕ ಕಾರ್ಖಾನೆಗಳಲ್ಲಿ ಉತ್ಕರ್ಷಣಕಾರಿಯಾಗಿ ಬಳಸುವರು.<br>★ ಕ್ರಿಮಿಮುಕ್ತಗೊಳಿಸಲು ಸೋಂಕುನಾಶಕವಾಗಿ ಬಳಸುವರು.<br>(ಯಾವುದಾದರೂ ಎರಡು) ½ + ½<br>b) i) ಮೊಸರು : ಲ್ಯಾಕ್ಟಿಕ್ ಆಮ್ಲ ½<br>ii) ಜಠರ ರಸ : ಹೈಡ್ರೋಕ್ಲೋರಿಕ್ ಆಮ್ಲ [ HCl ] ½ | 3 |
| 24. | ಕೊಟ್ಟಿರುವ ಆಧುನಿಕ ಆವರ್ತ ಕೋಷ್ಟಕದ ಭಾಗವನ್ನು ಗಮನಿಸಿ ಮತ್ತು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : | |

| **ಧಾತುಗಳು** | *p* | *q* | *r* | *s* |
|---|---|---|---|---|
| **ಪರಮಾಣು ಸಂಖ್ಯೆ** | 4 | 5 | 3 | 7 |

i) '*q*' ಮತ್ತು '*r*' ಧಾತುಗಳಲ್ಲಿನ ವೇಲೆನ್ಸ್ ಇಲೆಕ್ಟ್ರಾನ್‌ಗಳನ್ನು ಕಂಡುಹಿಡಿಯಿರಿ.

ii) ಯಾವ ಧಾತುವು ಹೆಚ್ಚಿನ ಪರಮಾಣು ಗಾತ್ರವನ್ನು ಹೊಂದಿದೆ ಮತ್ತು ಏಕೆ ?

iii) ಹೆಚ್ಚು ವಿದ್ಯುತ್ ಋಣೀಯ ಧಾತುವನ್ನು ಪತ್ತೆಹಚ್ಚಿ ಮತ್ತು ಕಾರಣ ಕೊಡಿ.

**ಅಥವಾ**

ಮೂರು ಧಾತುಗಳಾದ *x, y* ಮತ್ತು *z* ಗಳ ಇಲೆಕ್ಟ್ರಾನ್ ವಿನ್ಯಾಸವು ಕ್ರಮವಾಗಿ 2, 8, 7 ; 2, 8, 8 ಮತ್ತು 2, 8, 1 ಆಗಿದೆ. ಇವುಗಳಲ್ಲಿ

i) ಯಾವ ಧಾತುವು ಹೆಚ್ಚು ವಿದ್ಯುತ್ ಧನೀಯತೆ ಹೊಂದಿದೆ ಮತ್ತು ಏಕೆ ?

ii) ಯಾವ ಧಾತುವು ಸೊನ್ನೆ ವೇಲೆನ್ಸಿಯನ್ನು ಹೊಂದಿದೆ ಮತ್ತು ಏಕೆ ?

iii) '*x*' ಮತ್ತು '*z*' ಧಾತುಗಳು ಪರಸ್ಪರ ವರ್ತಿಸಿದಾಗ ಉಂಟಾಗುವ ರಾಸಾಯನಿಕ ಬಂಧವನ್ನು ಊಹಿಸಿ ಮತ್ತು ಕಾರಣವನ್ನು ತಿಳಿಸಿ.

***ಉತ್ತರ :***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | i) $q \rightarrow$ K 2, L 3 , ವೇಲೆನ್ಸ್ ಇಲೆಕ್ಟ್ರಾನ್‌ಗಳು = 3 ½<br>$r \rightarrow$ 2 1 , ವೇಲೆನ್ಸ್ ಇಲೆಕ್ಟ್ರಾನ್ = 1 ½<br>ii) $r \rightarrow$ ಆವರ್ತದಲ್ಲಿ ಎಡದಿಂದ ಬಲಕ್ಕೆ ಸಾಗಿದಂತೆ ಪರಮಾಣುವಿನ ಗಾತ್ರ ಕಡಿಮೆಯಾಗುತ್ತಾ ಹೋಗುತ್ತದೆ. / ಕೇವಲ ಒಂದು ವೇಲೆನ್ಸ್ ಎಲೆಕ್ಟ್ರಾನ್ ಮಾತ್ರ ಹೊರಕವಚದಲ್ಲಿ ಇರುವುದು. ½ + ½<br>iii) $s \rightarrow$ ಆವರ್ತದಲ್ಲಿ ಎಡದಿಂದ ಬಲಕ್ಕೆ ಸಾಗಿದಂತೆ ವಿದ್ಯುತ್ ಋಣೀಯತೆ ಹೆಚ್ಚಾಗುತ್ತಾ ಹೋಗುತ್ತದೆ. ½ + ½ | 3 |
| | **ಅಥವಾ**<br>i) $z \rightarrow$ ವಿದ್ಯುತ್‌ಧನೀಯತೆಯು ಆವರ್ತದಲ್ಲಿ ಎಡದಿಂದ ಬಲಕ್ಕೆ ಸಾಗಿದಂತೆ ಕಡಿಮೆಯಾಗುತ್ತದೆ. / ಹೊರಕವಚದ ಒಂದು ವೇಲೆನ್ಸ್ ಎಲೆಕ್ಟ್ರಾನ್ ಅನ್ನು ಸುಲಭವಾಗಿ ದಾನಿಸುತ್ತದೆ. ½ + ½<br>ii) $y \rightarrow$ ಹೊರ ಕಕ್ಷೆಯು $ns^2\ np^6$ / ಅಷ್ಟಕ ಜೋಡಣೆಯ ಎಲೆಕ್ಟ್ರಾನ್ ವಿನ್ಯಾಸವನ್ನು ಹೊಂದಿದೆ. ½ + ½<br>iii) ಅಯಾನಿಕ ಬಂಧ ಏಕೆಂದರೆ, ಇಲೆಕ್ಟ್ರಾನ್‌ಗಳ ಸಂಪೂರ್ಣ ವರ್ಗಾವಣೆಯಿಂದ ಉಂಟಾಗುವುದು. ½ + ½ | 3 |
| 25. | a) ಅನುರೂಪ ಶ್ರೇಣಿಯ ಮೊದಲ ಸದಸ್ಯನ ಅಣುಸೂತ್ರವು $C_2H_2$ ಆದರೆ, ಈ ಸರಣಿಯ ಮುಂದಿನ ಎರಡು ಸದಸ್ಯರ ಅಣುಸೂತ್ರ ಮತ್ತು ಹೆಸರುಗಳನ್ನು ಬರೆಯಿರಿ.<br>b) ಸಾಮಾನ್ಯವಾಗಿ ಸಸ್ಯಜನ್ಯ ಎಣ್ಣೆಗಳನ್ನು ಹೈಡ್ರೋಜನೀಕರಣಕ್ಕೆ ಒಳಪಡಿಸುವರು. ಏಕೆ ?<br>***ಉತ್ತರ :***<br>a) → $C_3H_4$ : ಪ್ರೋಪೈನ್ ½ + ½<br>→ $C_4H_6$ : ಬ್ಯೂಟೈನ್ ½ + ½<br>b) ಸಸ್ಯಜನ್ಯ ಎಣ್ಣೆಗಳ ಸಂಗ್ರಹಯೋಗ್ಯ ಅವಧಿಯನ್ನು ಹೆಚ್ಚಿಸಲು / ಎಣ್ಣೆಗಳು ಉತ್ಕರ್ಷಣೆ ಹೊಂದುವುದನ್ನು ತಡೆಯಲು / ಕಮಟುವಿಕೆಯನ್ನು ತಡೆಯಲು. 1 | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XI.** | **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ : 1 × 4 = 4** | |
| 26. | a) ಕೆಳಗಿನ ಕ್ರಿಯೆಗಳಿಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣ ಬರೆಯಿರಿ :<br>i) ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಸಿದಾಗ ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈಆಕ್ಸೈಡ್ ದೊರೆಯುತ್ತದೆ.<br>ii) ನೈಸರ್ಗಿಕ ಅನಿಲ (ಮೀಥೇನ್)ನ ದಹನಕ್ರಿಯೆಯಿಂದ ಕಾರ್ಬನ್ ಡೈಆಕ್ಸೈಡ್ ಮತ್ತು ನೀರು ದೊರೆಯುತ್ತದೆ.<br>b) ಕಾರಣ ಕೊಡಿ :<br>i) ತಾಮ್ರದಿಂದ ಮಾಡಿದ ವಸ್ತುಗಳನ್ನು ಗಾಳಿಗೆ ತೆರೆದಿಟ್ಟಾಗ ತಮ್ಮ ಮೇಲ್ಮೈನ ಹೊಳಪನ್ನು ಕಳೆದುಕೊಳ್ಳುತ್ತವೆ.<br>ii) ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಇರಿಸಿದ ಕಬ್ಬಿಣದ ಮೊಳೆಯು ನಿಧಾನವಾಗಿ ಕಂದು ಬಣ್ಣಕ್ಕೆ ಬದಲಾಗುತ್ತದೆ.<br>*ಉತ್ತರ:*<br>a) i) $CaCO_3 \rightarrow CaO + CO_2$ 1<br>ii) $CH_4 + 2O_2 \rightarrow CO_2 + 2H_2O$. 1<br>b) i) ವಾತಾವರಣದಲ್ಲಿನ ಗಾಳಿಯೊಂದಿಗೆ ವರ್ತಿಸಿ ತಾಮ್ರದ ಆಕ್ಸೈಡ್ ( CuO ) ಅಥವಾ ತಾಮ್ರದ ಕಾರ್ಬೋನೇಟ್ [ $CuCO_3$] ಆಗುತ್ತದೆ. / ತಾಮ್ರವು ಉತ್ಕರ್ಷಣೆ ಹೊಂದುವುದು / ತಾಮ್ರವು ಸಂಕ್ಷಾರಣೆಗೆ ಒಳಪಡುವುದು. (ಯಾವುದಾದರೂ ಒಂದು) 1<br>ii) ಸ್ಥಾನಪಲ್ಲಟ ಕ್ರಿಯೆ ನಡೆದಿದೆ. /<br>ಕಬ್ಬಿಣವು ತಾಮ್ರದ ಸಲ್ಫೇಟ್‌ನಿಂದ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿದೆ.<br>(ಯಾವುದಾದರೂ ಒಂದು) 1 | 4 |

| CCE RR/PR/PF/ NSR/NSPR FULL SYLLABUS | A |
|---|---|

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಜೂನ್ 2024 ರ ಪರೀಕ್ಷೆ - 2
**JUNE 2024 EXAMINATION - 2**

ಮಾದರಿ ಉತ್ತರಗಳು
**MODEL ANSWERS**

ಸಂಕೇತ ಸಂಖ್ಯೆ : **83-K (Bio)** CODE NO. : **83-K (Bio)**

ವಿಷಯ : **ವಿಜ್ಞಾನ**

**Subject : SCIENCE**

(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / **Physics, Chemistry & Biology**)
(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)
(**Regular Repeater / Private Repeater / Private Fresh / NSR / NSPR**)
(ಕನ್ನಡ ಮಾಧ್ಯಮ / **Kannada Medium**)
(ಜೀವ ವಿಜ್ಞಾನ / **Biology**)

ದಿನಾಂಕ : **20. 06. 2024** ] [ ಗರಿಷ್ಠ ಅಂಕಗಳು : **80**
**Date : 20. 06. 2024** ] [ **Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – C**<br>**( ಜೀವ ವಿಜ್ಞಾನ )** | |
| **XII.** | **ಬಹು-ಆಯ್ಕೆ ಪ್ರಶ್ನೆಗಳು : 2 × 1 = 2** | |
| 27. | ಸಸ್ಯಗಳ ಕ್ಸೈಲಂ ಅಂಗಾಂಶದಿಂದ ಸಾಗಾಣಿಕೆಯಾಗುವ ವಸ್ತು<br>(A) ಆಹಾರ (B) ಆಕ್ಸಿಜನ್<br>(C) ನೀರು (D) ಕಾರ್ಬನ್ ಡೈಆಕ್ಸೈಡ್<br>*ಉತ್ತರ :* (C) ನೀರು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 28. | ಕೆಳಗಿನ ಹೂವಿನ ಚಿತ್ರಗಳಲ್ಲಿ ಸ್ವಕೀಯ ಪರಾಗಸ್ಪರ್ಶಕ್ಕೆ ಒಳಪಡಬಹುದಾದ ಹೂವು  ( *P* ) ( *Q* ) ( *R* ) <br> (A) *P* ಮಾತ್ರ (B) *R* ಮಾತ್ರ <br> (C) *P* ಮತ್ತು *R* ಎರಡೂ (D) *Q* ಮಾತ್ರ <br> ***ಉತ್ತರ :*** (D) *Q* ಮಾತ್ರ | 1 |
| **XIII.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 1 = 2** | |
| 29. | ತೆರೆದ ಪತ್ರರಂಧ್ರದ ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ. <br> ***ಉತ್ತರ :***  | 1 |
| 30. | ಶೀತಲೀಕರಣ ಘಟಕಗಳಲ್ಲಿ CFC ಗಳ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಏಕೆ ? <br> ***ಉತ್ತರ :*** <br> CFC ಗಳು ಓಝೋನ್ ಪದರದ ತೆಳುವಾಗುವಿಕೆ ಅಥವಾ ಶಿಥಿಲವಾಗುವಿಕೆಗೆ ಕಾರಣವಾಗುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIV.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 2 = 6** | |
| 31. | a) "ಮರುಬಳಕೆಯು ಮರುಚಕ್ರೀಕರಣಕ್ಕಿಂತ ಉತ್ತಮ ಅಭ್ಯಾಸವಾಗಿದೆ." ಕಾರಣ ಕೊಡಿ. | |
| | b) ಸ್ಥಳೀಯ ಜನರ ಯಾವ ಅಗತ್ಯತೆಗಳು ಕಾಡುಗಳಿಂದ ಪೂರೈಕೆಯಾಗುತ್ತವೆ ? | |
| | **ಅಥವಾ** | |
| | a) "ಕಾಗದ ರಹಿತ ಕೆಲಸವು ಒಂದು ಉತ್ತಮ ಅಭ್ಯಾಸ" ಕಾರಣ ಕೊಡಿ. | |
| | b) ಕೃಷಿ ಭೂಮಿಯಲ್ಲಿ 'ಚೆಕ್‌ಡ್ಯಾಂ'ಗಳನ್ನು ನಿರ್ಮಿಸುವುದರಿಂದ ಆಗುವ ಎರಡು ಪ್ರಯೋಜನಗಳನ್ನು ತಿಳಿಸಿ. | |
| | ***ಉತ್ತರ :*** | |
| | a) ★ ಮರುಚಕ್ರೀಕರಣವು ಸ್ವಲ್ಪ ಶಕ್ತಿಯನ್ನು ಬಳಸಿಕೊಳ್ಳುತ್ತದೆ. | |
| | (ಸೂಕ್ತ ಅಂಶ ಪರಿಗಣಿಸಿ) ½ | |
| | b) ★ ಅಧಿಕ ಪ್ರಮಾಣದ ಉರುವಲು, ಸಣ್ಣ ಮರಮುಟ್ಟುಗಳು ಮತ್ತು ಹುಲ್ಲಿನ ಅವಶ್ಯಕತೆ | |
| | ★ ಗುಡಿಸಲಿನ ಮೇಲ್ಹಾವಣಿ ಮತ್ತು ಆಹಾರವಸ್ತುಗಳನ್ನು ಸಂರಕ್ಷಿಸಲು ಬುಟ್ಟಿಗಳ ತಯಾರಿಕೆಗಾಗಿ ಬಿದಿರು. | |
| | ★ ಕೃಷಿಗೆ ಮತ್ತು ಮೀನುಗಾರಿಕೆಗೆ ಅವಶ್ಯಕವಾದ ಸಾಧನಗಳನ್ನು ತಯಾರಿಸಲು ಮರಗಳು. | |
| | ★ ಆಹಾರ ಮತ್ತು ಔಷಧ ಸಂಪನ್ಮೂಲಗಳಿಗಾಗಿ | |
| | ★ ಜಾನುವಾರುಗಳಿಗೆ ಆಹಾರಕ್ಕಾಗಿ | |
| | (ಯಾವುದಾದರೂ ಮೂರು) ½ + ½ + ½ | 2 |
| | **ಅಥವಾ** | |
| | a) ಹೆಚ್ಚು ಕಾಗದಗಳ ಬಳಕೆಯು ಅರಣ್ಯನಾಶಕ್ಕೆ ಕಾರಣವಾಗುತ್ತಿದೆ. | |
| | (ಸೂಕ್ತವಾದ ಇತರೆ ಅಂಶವನ್ನು ಪರಿಗಣಿಸಿ) 1 | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ★ ಸುತ್ತಲಿನ ಕೃಷಿ ಪ್ರದೇಶವನ್ನು ತೇವಾಂಶವಾಗಿಡುವುದರಿಂದ, ಇಳುವರಿಯನ್ನು ಹೆಚ್ಚಿಸುವುದು. ½<br>★ ಅಂತರ್ಜಲದ ಮಟ್ಟ ಹೆಚ್ಚುತ್ತದೆ. ½<br>(ಇತರೆ ಯಾವುದೇ ಸೂಕ್ತವಾದ ಎರಡು ಅಂಶಗಳು) | 2 |
| 32. | ಮಾನವರಲ್ಲಿ ಮಗುವಿನ ಲಿಂಗನಿರ್ಧರಣೆಗೆ ತಂದೆಯು ಹೇಗೆ ಕಾರಣನಾಗುತ್ತಾನೆ ? ವಿವರಿಸಿ.<br>***ಉತ್ತರ :***<br>★ ತಂದೆಯ ಲಿಂಗಾಣುಕೋಶದಲ್ಲಿ ಒಂದು ಜೋಡಿ ಬೇಸ ವರ್ಣತಂತು ಕಂಡು ಬರುತ್ತವೆ. ಅವು *'X'* ಮತ್ತು *'Y'* ವರ್ಣತಂತುಗಳಾಗಿವೆ.<br>★ ಆದರೆ ತಾಯಿಯ ಲಿಂಗಾಣುಕೋಶದಲ್ಲಿ ಕೇವಲ *'XX'* ವರ್ಣತಂತುಗಳಿರುತ್ತವೆ.<br>★ ತಂದೆಯಿಂದ ಏಕಗುಣಿತ ವರ್ಣತಂತು *'X'* ಅನ್ನು ಪಡೆದ ಮಗು ತಾಯಿಯಿಂದ *'X'* ವರ್ಣತಂತುವನ್ನೇ ಪಡೆಯುವುದರಿಂದ, *'XX'* ವರ್ಣತಂತು ಜೋಡಿಯು ಹೆಣ್ಣು ಮಗುವನ್ನು ಪ್ರತಿನಿಧಿಸುತ್ತದೆ.<br>★ ತಂದೆಯಿಂದ *'Y'* ವರ್ಣತಂತು ಪಡೆದ ಮಗು, ತಾಯಿಯಿಂದ *'X'* ವರ್ಣತಂತು ಪಡೆಯುತ್ತದೆ. ಇದರಿಂದ ಮಗುವಿನ ಲಿಂಗಾಣುಕೋಶವು *'XY'* ಆಗುತ್ತದೆ. ಈ ಜೋಡಿಯು ಗಂಡು ಮಗುವನ್ನು ಪ್ರತಿನಿಧಿಸುತ್ತದೆ.<br>ಆದುದರಿಂದ ಮಾನವರಲ್ಲಿ ಮಗುವಿನ ಲಿಂಗ ನಿರ್ಧರಣೆಗೆ ತಂದೆಯೇ ಕಾರಣನಾಗಿದ್ದಾನೆ.<br>**ಅಥವಾ**<br><br> | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

33. ಒಂದು ಜಲಪರಿಸರ ವ್ಯವಸ್ಥೆಯಲ್ಲಿ ಮೀನುಗಳು, ಪಕ್ಷಿಗಳು, ಕೀಟ ಡಿಂಭಕಗಳು ಮತ್ತು ಡಯಾಟಮ್‌ಗಳು ಕಂಡುಬಂದಿವೆ. ಈ ಜೀವಿಗಳನ್ನು ಬಳಸಿಕೊಂಡು ಒಂದು ಆಹಾರ ಸರಪಳಿ ರಚಿಸಿ. ಈ ಆಹಾರ ಸರಳಿಯಲ್ಲಿ ತೃತೀಯ ಭಕ್ಷಕ ಜೀವಿಗಳಿಗೆ 10 ಕ್ಯಾಲೋರಿಗಳಷ್ಟು ಶಕ್ತಿಯು ಲಭ್ಯವಾದರೆ, ಮೊದಲನೇ ಪೋಷಣಾಸ್ತರದ ಜೀವಿಗಳಲ್ಲಿ ಉತ್ಪಾದನೆಯಾದ ಶಕ್ತಿಯ ಪ್ರಮಾಣ ಎಷ್ಟು ?

***ಉತ್ತರ :***

*ಆಹಾರ ಸರಪಳಿ :*

* ಡಯಾಟಮ್‌ಗಳು → ಕೀಟ ಡಿಂಭಕಗಳು → ಮೀನುಗಳು → ಪಕ್ಷಿಗಳು — 1

ಉತ್ಪಾದಕರು → ಪ್ರಾಥಮಿಕ ಭಕ್ಷಕ → ದ್ವಿತೀಯ ಭಕ್ಷಕ → ತೃತೀಯ ಭಕ್ಷಕ

↓ 10,000 ಕ್ಯಾಲೋರಿಗಳು — ↓ 1000 ಕ್ಯಾಲೋರಿಗಳು — ↓ 100 ಕ್ಯಾಲೋರಿಗಳು — ↓ 10 ಕ್ಯಾಲೋರಿಗಳು

* ಮೊದಲನೇ ಪೋಷಣಾ ಸ್ತರದಲ್ಲಿನ ಜೀವಿಗಳು ಉತ್ಪಾದಿಸಿದ ಶಕ್ತಿಯ ಪ್ರಮಾಣ 10,000 ಕ್ಯಾಲೋರಿಗಳು — 1

ಅಂಕಗಳು: 2

**XV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9**

34. a) ಮುಟ್ಟಿದರೆ ಮುನಿ ಸಸ್ಯವು ಸ್ಪರ್ಶಕ್ಕೆ ಹೇಗೆ ಪ್ರತಿಕ್ರಿಯಿಸುತ್ತದೆ ? ವಿವರಿಸಿ.

b) 'ಆಕ್ಸಿನ್' ಮತ್ತು 'ಅಬ್ಸಿಸಿಕ್ ಆಮ್ಲ' ಹಾರ್ಮೋನ್‌ಗಳ ಒಂದೊಂದು ಕಾರ್ಯವನ್ನು ತಿಳಿಸಿ.

**ಅಥವಾ**

a) ಸ್ನಾಯುಕೋಶಗಳು ನರಾವೇಗಗಳಿಗೆ ಹೇಗೆ ಪ್ರತಿಕ್ರಿಯಿಸುತ್ತವೆ ?

b) ಮಾನವರಲ್ಲಿ 'ಇನ್ಸುಲಿನ್' ಮತ್ತು 'ಈಸ್ಟ್ರೋಜನ್' ಹಾರ್ಮೋನ್‌ಗಳ ಕಾರ್ಯವನ್ನು ತಿಳಿಸಿ.

***ಉತ್ತರ :***

a) ★ ಸ್ಪರ್ಶಕ್ಕೆ ಒಳಗಾದ ಎಲೆಗಳು ಚಲನೆಗೆ ವಿದ್ಯುತ್ ರಾಸಾಯನಿಕ ಆವೇಗಗಳನ್ನು ಬಳಸುತ್ತವೆ. — ½

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | ★ ಈ ಚಲನೆಗಾಗಿ ಸಸ್ಯದ ಜೀವಕೋಶಗಳು ತಮ್ಮೊಳಗಿನ ನೀರಿನ ಪ್ರಮಾಣವನ್ನು ಬದಲಾಯಿಸಿ ತಮ್ಮ ಆಕಾರವನ್ನು ಬದಲಿಸುತ್ತವೆ. | 1 | |
| | ★ ಈ ಪರಿಣಾಮದಿಂದಾಗಿ ಜೀವಕೋಶಗಳು ಉಬ್ಬುವ ಅಥವಾ ಮುದುಡುವ ಮೂಲಕ ಎಲೆಯ ಆಕಾರವನ್ನು ಬದಲಿಸುತ್ತವೆ. | ½ | |
| | b) ಆಕ್ಸಿನ್‌ಗಳು : ಸಸ್ಯದ ಕಾಂಡದ ತುದಿಭಾಗದ ಜೀವಕೋಶಗಳ ಉದ್ದವನ್ನು ಹೆಚ್ಚಿಸುತ್ತವೆ. | ½ | |
| | ಅಬ್ಸಿಸಿಕ್ ಆಮ್ಲ : ಸಸ್ಯದ ಬೆಳವಣಿಗೆಯನ್ನು ಪ್ರತಿಬಂಧಿಸುತ್ತದೆ. | ½ | 3 |
| | **ಅಥವಾ** | | |
| | a) ★ ಸ್ನಾಯುಕೋಶಗಳು ನರಕೋಶಗಳಿಂದ ನರವೇಗಗಳನ್ನು ಸ್ವೀಕರಿಸುತ್ತವೆ. | ½ | |
| | ★ ನರಾವೇಗಗಳಿಂದ ಪಡೆದ ವಿದ್ಯುತ್‌ಸಂಕೇತಗಳನ್ನು ಸ್ನಾಯುಕೋಶಗಳು ರಾಸಾಯನಿಕ ಸಂಕೇತಗಳಾಗಿ ಪರಿವರ್ತಿಸುತ್ತವೆ. | ½ | |
| | ★ ಆಗ ಸ್ನಾಯುಕೋಶಗಳಲ್ಲಿರುವ ವಿಶೇಷ ಪ್ರೋಟೀನ್‌ಗಳು ತಮ್ಮ ಆಕಾರ ಮತ್ತು ಸಂಯೋಜನೆಯನ್ನು ಬದಲಿಸಿಕೊಳ್ಳುತ್ತವೆ. | ½ | |
| | ★ ಪ್ರೋಟೀನ್‌ಗಳ ಹೊಸ ಸಂಯೋಜನೆಯಿಂದ ಸ್ನಾಯುಕೋಶಗಳು ಉದ್ದವಾಗುತ್ತವೆ ಅಥವಾ ಗಿಡ್ಡವಾಗುತ್ತವೆ. | ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ಇನ್ಸುಲಿನ್ : ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ನಿಯಂತ್ರಿಸುತ್ತದೆ. ½<br>ಈಸ್ಟ್ರೋಜನ್ : ಹೆಣ್ಣು ಸಂತಾನೋತ್ಪತ್ತಿ ಅಂಗಗಳ ಬೆಳವಣಿಗೆ / ಋತುಚಕ್ರದ ನಿಯಂತ್ರಣ. ½ | 3 |
| 35. | ಮಾನವನ ಮಿದುಳಿನ ನೀಳಛೇದ ನೋಟದ ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :<br>i) ಮಹಾಮಸ್ತಿಷ್ಕ<br>ii) ಮೆಡುಲ್ಲಾ<br>**ಉತ್ತರ :**<br>ಮಾನವನ ಮಿದುಳಿನ ನೀಳಛೇದ ನೋಟದ ರಚನೆ<br><br><br>ಚಿತ್ರಕ್ಕೆ — 2<br>ಭಾಗಗಳಿಗೆ — ½ + ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಕೆಂಪು (*RR*) ಹೂವುಗಳನ್ನು ಉತ್ಪಾದಿಸುವ ಸಂಜೆಮಲ್ಲಿಗೆ ಸಸ್ಯವನ್ನು ಬಿಳಿ (*WW*) ಹೂವುಗಳನ್ನು ಉತ್ಪಾದಿಸುವ ಸಂಜೆಮಲ್ಲಿಗೆ ಸಸ್ಯದೊಂದಿಗೆ ಅಡ್ಡಹಾಯಿಸಿದೆ. ಈ ಸಸ್ಯಗಳ $F_2$ ಪೀಳಿಗೆಯಲ್ಲಿ 25% ರಷ್ಟು ಕೆಂಪು, 25% ರಷ್ಟು ಬಿಳಿ ಮತ್ತು 50% ರಷ್ಟು ಸಸ್ಯಗಳು ಮಿಶ್ರತಳಿ ಹೂವುಗಳನ್ನು ಉತ್ಪಾದಿಸುವ ಸಸ್ಯಗಳು ದೊರೆತಿವೆ.<br>*ಹಾಗಾದರೆ,*<br>i) $F_1$ ಪೀಳಿಗೆಯ ಸಸ್ಯಗಳ ಲಕ್ಷಣಗಳೇನು ?<br>ii) ಚಕ್ಕರ್ ಬೋರ್ಡ್‌ನ ಸಹಾಯದಿಂದ $F_2$ ಪೀಳಿಗೆಯಲ್ಲಿನ ಫಲಿತಾಂಶಗಳನ್ನು ತೋರಿಸಿ ಮತ್ತು ಜೀನ್ ನಮೂನೆ ಅನುಪಾತ ತಿಳಿಸಿ.<br>iii) $F_1$ ಮತ್ತು $F_2$ ಪೀಳಿಗೆಗಳ ಫಲಿತಾಂಶಗಳನ್ನು ವಿಶ್ಲೇಷಿಸಿ ಗುಣಗಳು 'ಪ್ರಬಲ'ವೇ ಅಥವಾ 'ದುರ್ಬಲ'ವೇ ನಿರ್ಧರಿಸಿ.<br>**ಅಥವಾ**<br>ಕೊಟ್ಟಿರುವ ಸಂದರ್ಭಗಳನ್ನು ಓದಿ, ವಿಶ್ಲೇಷಿಸಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :<br>*ಸಂದರ್ಭ* (1) : ಈಗ ವಿವಿಧ ಬಣ್ಣಗಳಲ್ಲಿ ಹಾಗೂ ಗಾತ್ರಗಳಲ್ಲಿ ಅನೇಕ ತರಕಾರಿಗಳು ಮತ್ತು ಹಣ್ಣುಗಳು ದೊರಕುವುದು.<br>*ಸಂದರ್ಭ (2) :* ಕೆಲವು ಕೈಗಾರಿಕಾ ವಲಯಗಳಲ್ಲಿ ಕಾರ್ಬನ್ ಹೆಚ್ಚಳದಿಂದ ಡ್ರಾಸೋಫಿಲಾ ಕೀಟಗಳ ಜೀವಿಸಂದಣಿಯಲ್ಲಿ ರೆಕ್ಕೆಗಳ ಬಣ್ಣ ಕಪ್ಪಾಗುತ್ತಿದೆ.<br>ಇಲ್ಲಿ,<br>i) ಆನುವಂಶೀಯ ದಿಕ್ಚ್ಯುತಿಯು ಯಾವ ಸಂದರ್ಭದಲ್ಲಿ ವೇಗವಾಗಿದೆ ಮತ್ತು ಏಕೆ ?<br>ii) ಎರಡೂ ಸಂದರ್ಭಗಳಲ್ಲಿ ಗುಣಗಳು ಆನುವಂಶೀಯವಾಗುತ್ತವೆಯೇ ? ಇಲ್ಲವೆ ? ನಿಮ್ಮ ಉತ್ತರವನ್ನು ಸಮರ್ಥಿಸಿ.<br>***ಉತ್ತರ :***<br>i) *RR* × *WW*<br>↓<br>*RW*<br>$F_1$ ಪೀಳಿಗೆ [ ಎಲ್ಲವೂ ಮಿಶ್ರತಳಿಗಳಾಗಿವೆ ] | ½ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ii) $F_2$ ಪೀಳಿಗೆ : | |

| ಲಿಂಗಾಣುಗಳು | *R* | *W* |
|---|---|---|
| *R* | *RR* | *RW* |
| *W* | *RW* | *WW* |

1

ಜೀನ್ ನಮೂನೆ ಅನುಪಾತ : 1 : 2 : 1 ½

iii) $F_1$ - ಪೀಳಿಗೆಯಲ್ಲಿ 100% ರಷ್ಟು ಸಸ್ಯಗಳು ಮಿಶ್ರತಳಿಗಳಾಗಿವೆ.

In $F_2$ - ಪೀಳಿಗೆಯಲ್ಲಿ 50% ರಷ್ಟು ಸಸ್ಯಗಳು ಮಿಶ್ರತಳಿಗಳಾಗಿವೆ.

ಆದ್ದರಿಂದ, ಕೆಂಪು ಹೂವುಗಳನ್ನು ಉತ್ಪಾದಿಸುವ ಇಲ್ಲವೇ ಬಿಳಿ ಹೂವುಗಳನ್ನು ಉತ್ಪಾದಿಸುವ ಸಸ್ಯಗಳು ಪ್ರಬಲವೂ ಅಲ್ಲ ದುರ್ಬಲವೂ ಅಲ್ಲ. 1 — 3

**ಅಥವಾ**

i) ಸಂದರ್ಭ (1) ½

ಏಕೆಂದರೆ, ಇಲ್ಲಿನ ಬದಲಾವಣೆಗಳು ಕೃತಕ ಆಯ್ಕೆಯನ್ನು ನಿದರ್ಶಿಸುತ್ತಿವೆ. / ವಿವಿಧ ತಳಿಗಳನ್ನು ಪಡೆಯಲು ಕೃತಕ ಆಯ್ಕೆಯ ಮೂಲಕ ಸಂಕರಣಗೊಳಿಸಲಾಗಿದೆ. 1

ii) ಸಂದರ್ಭ (1) ರಲ್ಲಿ ಗುಣಗಳು ಆನುವಂಶೀಯವಾಗಿರಬಹುದು ಅಥವಾ ಆನುವಂಶೀಯವಾಗಿಲ್ಲದೇ ಇರಬಹುದು. ½

ಆದರೆ, ಸಂದರ್ಭ (2) ರಲ್ಲಿ ಆನುವಂಶೀಯ ಭಿನ್ನತೆಗಳು ಮತ್ತು ಅವುಗಳ ಹರಿವು ಜರುಗುತ್ತದೆ. ಏಕೆಂದರೆ ಇದು ನೈಸರ್ಗಿಕ ಆಯ್ಕೆಯಾಗಿದೆ ಮತ್ತು ಗುಣಗಳು ಆನುವಂಶೀಯವಾಗುತ್ತವೆ. 1 — 3

**XVI.** **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **2 × 4 = 8**

37. a) ಅಲೈಂಗಿಕ ಸಂತಾನೋತ್ಪತ್ತಿ ಎಂದರೇನು ? ಪ್ಲನೇರಿಯಾ ಮತ್ತು ರೈಜೋಪಸ್ ಜೀವಿಗಳಲ್ಲಿ ಜರುಗುವ ಅಲೈಂಗಿಕ ಸಂತಾನೋತ್ತಿಯ ವಿಧವನ್ನು ತಿಳಿಸಿ.

b) ಮಾನವರ ಪುರುಷ ಸಂತಾನೋತ್ಪತ್ತಿ ವ್ಯೂಹದಲ್ಲಿ 'ವೃಷಣಗಳು' ಮತ್ತು 'ಪ್ರೋಸ್ಟೇಟ್' ಗ್ರಂಥಿಗಳ ಪಾತ್ರವೇನು ?

***ಉತ್ತರ :***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | a) ★ ಲಿಂಗಾಣುಗಳ ಸಂಯೋಜನೆ ಇಲ್ಲದೇ ಮರಿಜೀವಿಗಳನ್ನು ಉಂಟುಮಾಡುವುದು. | 1 | |
| | ★ ಪ್ಲನೇರಿಯಾ : ಪುನರುತ್ಪಾದನೆ | ½ | |
| | ರೈಜೋಪಸ್ : ಬೀಜಾಣುಗಳ ಉತ್ಪಾದನೆ | ½ | |
| | b) ವೃಷಣಗಳು : | | |
| | ★ ವೀರ್ಯಾಣು / ಗಂಡು ಲಿಂಗಾಣು ಕೋಶಗಳ ಉತ್ಪಾದನೆ | | |
| | ★ ಟೆಸ್ಟೋಸ್ಟೀರಾನ್ ಹಾರ್ಮೋನ್ ಉತ್ಪಾದನೆಯ ನಿಯಂತ್ರಣ | 1 | |
| | ಪ್ರೋಸ್ಟ್ರೇಟ್ ಗ್ರಂಥಿ : | | |
| | ಇದರ ಸ್ರವಿಕೆಯ ವೀರ್ಯಾಣು ಕೋಶಗಳ ಚಲನೆಗೆ ಪೋಷಣಾ ಮಾಧ್ಯಮವನ್ನು ಒದಗಿಸುತ್ತದೆ. | 1 | 4 |
| 38. | a) ನೆಫ್ರಾನ್‌ಗಳಲ್ಲಿ ಮೂತ್ರ ಉತ್ಪತ್ತಿಯಾಗುವ ಪ್ರಕ್ರಿಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. | | |
| | b) ಉನ್ನತ ಸಸ್ಯಗಳಲ್ಲಿ ಆಹಾರ ಪದಾರ್ಥಗಳ ಸಾಗಾಣಿಕೆ ಹೇಗೆ ನಡೆಯುತ್ತದೆ ? ವಿವರಿಸಿ. | | |
| | *ಉತ್ತರ :* | | |
| | a) *ನೆಫ್ರಾನ್‌ಗಳಲ್ಲಿ ಮೂತ್ರ ಉತ್ಪಾದನೆ :* | | |
| | ★ ನೆಫ್ರಾನ್ ಮೂತ್ರಜನಕಾಂಗದ ರಚನಾತ್ಮಕ ಮತ್ತು ಕಾರ್ಯ ನಿರ್ವಾಹಕ ಘಟಕವಾಗಿದೆ. | | |
| | ★ ಮೂತ್ರಪಿಂಡಗಳಲ್ಲಿ ರಕ್ತವನ್ನು ಸೋಸುವ ಘಟಕಗಳೆಂದರೆ ತೆಳುವಾದ ಭಿತ್ತಿಯನ್ನು ಹೊಂದಿರುವ ಲೋಮನಾಳಗಳು. | ½ | |
| | ★ ಈ ಲೋಮನಾಳಗಳು ನೆಫ್ರಾನ್‌ನ ಬಟ್ಟಲಿನಾಕಾರದ ರಚನೆಯಲ್ಲಿ ರಕ್ತವನ್ನು ಸೋಸುವಿಕೆಗೆ ಒಳಪಡಿಸುತ್ತವೆ. | ½ | |

| ಪ್ರಶ್ನೆ ಸಂಖ್ಯೆ | | | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|---|---|
| | | ★ | ಈ ಹಂತದಲ್ಲಿ ಶೋಧಿಸಲ್ಪಟ್ಟ ಗ್ಲುಕೋಸ್ ಅಮೈನೋ ಆಮ್ಲ, ಲವಣಗಳು ಮತ್ತು ನೀರಿನಂತಹ ವಸ್ತುಗಳು ಮೂತ್ರನಾಳದಲ್ಲಿ ಪುನಃ ಹೀರಲ್ಪಡುತ್ತವೆ. | 1 | |
| | | | ಈ ಕ್ರಿಯೆಯ ನಂತರ ಉಂಟಾದ ದ್ರವ ಉಪ ಉತ್ಪನ್ನವೇ ಮೂತ್ರ. | | |
| | b) | ★ | ಸಸ್ಯಗಳಲ್ಲಿ ಆಹಾರವನ್ನು ಸಾಗಿಸುವ ಅಂಗಾಂಶ ಫ್ಲೋಯಂ. | ½ | |
| | | ★ | ದ್ಯುತಿಸಂಶ್ಲೇಷಣೆಯ ವಿಲೀನಗೊಳ್ಳಬಹುದಾದ ಉತ್ಪನ್ನಗಳು, ಅಮೈನೋ ಆಮ್ಲಗಳು ಮತ್ತು ಇತರ ವಸ್ತುಗಳನ್ನು ಎಲೆಗಳಿಂದ ಸಸ್ಯದ ಎಲ್ಲಾ ಭಾಗಗಳಿಗೆ ಸಾಗಿಸುತ್ತದೆ. | ½ | |
| | | ★ | ವಸ್ತುಗಳ ಸ್ಥಾನಾಂತರಣವು ಜರಡಿನಾಳದ ಪಾರ್ಶ್ವ ಸಂಗಾತಿ ಜೀವಕೋಶದ ಸಹಾಯದಿಂದ ವಲೀನಗೊಳ್ಳಬಹುದಾದ ಮೇಲ್ಮುಖ ಮತ್ತು ಕೆಳಮುಖ ಎರಡೂ ದಿಕ್ಕುಗಳಲ್ಲಿ ನಡೆಯುತ್ತದೆ. | ½ | |
| | | ★ | ಅಭಿಸರಣ ಒತ್ತಡವು ಫ್ಲೋಯನಿಂದ ವಸ್ತುಗಳು ಕಡಿಮೆ ಒತ್ತಡವಿರುವ ಅಂಗಾಂಶಗಳಿಗೆ ಚಲಿಸುವಂತೆ ಮಾಡುತ್ತದೆ. | ½ | 4 |